ಶ್ರೀ ಎಚ್. ಎಂ. ಚನ್ನಬಸಪ್ಪ.—ನಿದರ್ಶನ ತಂದುಕೊಟ್ಟರೆ ಆ ವಿಷಯವನ್ನು ಪರಿಶೀಲನೆ ಮಾಡೋಣ.

ಶ್ರೀ ಕೊಣಂದೂರು ಲಿಂಗಪ್ಪ.—ಹಿರೇಕರೂರು ಚುನಾವಣೆಯಲ್ಲಿ 29 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ ಅದೇ ರೀತಿ ರಾಜ್ಯದ ಎಲ್ಲಾ ತಾಲ್ಲೂಕ್‌ಗಳಲ್ಲಿಯೂ ಸಾಮಾನ್ಯವಾಗಿ ಹಂಚಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—20 ಲಕ್ಷ ರೂಪಾಯಿಯನ್ನು ಒಂದು ವರ್ಷದಲ್ಲಿ ಖರ್ಚು ಮಾಡಿಲ್ಲ, ನೀವು ತಿಳಿದುಕೊಂಡಿರುವುದು ತಪ್ಪು. 1970—71ರಲ್ಲಿ 6 ಲಕ್ಷ 8 ಸಾವಿರ, 1971—72 ರಲ್ಲಿ 7 ಲಕ್ಷ 92 ಸಾವಿರ, 1972—73 ರಲ್ಲಿ 6 ಲಕ್ಷ 37 ಸಾವಿರ ರೂಪಾಯಿ ಖರ್ಚಾಗಿದೆ. ಆದುದರಿಂದ ನೀವು ತಿಳಿದುಕೊಂಡಿರುವ ಹಾಗೆ 20 ಲಕ್ಷ ರೂಪಾಯಿಗಳನ್ನು ಒಂದೇ ವರ್ಷಕ್ಕೆ ಖರ್ಚು ಮಾಡಿಲ್ಲ.

EXCAVATION OF MINERAL WEALTH NEAR MATHIGHATA

311. Smt. RADHA BHAT (Ankola).—

Will the Minister for Industries and Parliamentary Affairs please refer to replies given to my Starred Question No. 696. (896) of 48th List of 3rd Session and be pleased to state :—

(a) the stage at which the excavation work of mineral wealth at Mathigatta in Sirsi Taluk and its details ;

(b) whether the establishment of an Industrial Estate at Sirsi is under the consideration of the Government ; if so, the period within which it could be established ?

Sri S. M. KRISHNA (Minister for Industries and Parliamentary Affairs).—

(a) The excavation of Iron Ore, Lime Stone and Manganese Ore near Mathigatta has been conducted and it is estimated that about 20 million tonnes of Iron Ore may be available there.

(b) Yes. The proposal to establish an Industrial Estate is under the consideration of the Government. The arrangements will be made to establish the Estate after obtaining the required site from the Forest Department.

ಶ್ರೀಮತಿ ರಾಧಾಭಟ್.—ಮತಿಘಟ್ಟ ಪ್ರದೇಶದಲ್ಲಿ ಕಬ್ಬಿಣದ ಅದಿರು, ಸುಣ್ಣದ ಕಲ್ಲು ಮತ್ತು ಮ್ಯಾಂಗನೀಸ್ ಇವುಗಳ ಸಂಶೋಧನೆ ಯಾವಾಗ ಪೂರ್ಣವಾಯಿತು ಮತ್ತು ಎಲ್ಲಿ ದೊರೆಯುವ ಅದಿರನ್ನು ಉಪಯೋಗಿಸಿಕೊಂಡು ಯಾವುದಾದರೂ ಉದ್ದಿಮೆ ಸ್ಥಾಪಿಸಲು ಮತ್ತು ಅದನ್ನು ಕಾರವಾರ ಬಂದರು ವರೆಗೆ ರಫ್ತು ಮಾಡಲು ಸರ್ಕಾರದವರು ಯಾವ ಕಾರ್ಯ ಕ್ರಮವನ್ನು ಕೈಕೊಂಡಿದ್ದಾರೆ.

†ಶ್ರೀ ಎಸ್ ಎಂ. ಕೃಷ್ಣ.—ಉತ್ತರದಲ್ಲಿಯೇ ಹೇಳಿದೆ. ಸುಮಾರು 20 ಮಿಲಿಯನ್ ಟನ್ ಐರನ್ ಓರ್ ಒಂದು ವರ್ಷಕ್ಕೆ ಸಿಕ್ಕಬಹುದು. ಆದರೆ ಈ ಪ್ರದೇಶದಲ್ಲಿ ಮುಖ್ಯವಾಗಿ ಆಗಬೇಕಾಗಿರ ತಕ್ಕಂಥ ರಸ್ತೆಗಳ ನಿರ್ಮಾಣ ಆಗಬೇಕು ಮತ್ತು ಇತರ ಕಾರ್ಯಗಳು ಆಗಬೇಕು ಅದು ಆದಕೂಡಲೇ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀಮತಿ ರಾಧಾಭಟ್.—ಶಿರಸಿಯಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್ ಸ್ಥಾಪಿಸಲು ಎಷ್ಟು ಎಕರೆ ಪ್ರದೇಶವನ್ನು ಅರಣ್ಯ ಖಾತೆಯಿಂದ ತೆಗೆದುಕೊಳ್ಳಲು ಸರ್ಕಾರದವರು ಯೋಚನೆ ಮಾಡಿದ್ದಾರೆ ? ಆ ಭೂಮಿಯನ್ನು ತೆಗೆದುಕೊಳ್ಳುವುದಕ್ಕೆ ಸೂಕ್ತ ಕಾರ್ಯಕ್ರಮವನ್ನು ಕೈಕೊಂಡಿದ್ದಾರೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಸುಮಾರು 20 ಎಕರೆ ಭೂಮಿಬೇಕೆಂದು ಅರಣ್ಯ ಇಲಾಖೆಯವರನ್ನು ನಾವು ಕೇಳಿದ್ದೇವೆ. 1.69ನೇ ಇಸವಿಯಿಂದ ಅದು ಅರಣ್ಯ ಇಲಾಖೆಯವರ ಕೈಮುಷ್ಟಿಯಲ್ಲಿದೆ. ಇತ್ತೀಚೆಗೆ ನಾವು ಈ ಏರಿಯಾ ಫಾರೆಸ್ಟ್ ರೇಂಜಿನಿಂದ ಹೊರಗಡೆ ಇದೆ ಎಂದು ಡಿಕ್ಲೇರ್ ಮಾಡಿ 20 ಎಕರೆಯನ್ನು ನಮಗೆ ಕೊಡಬೇಕೆಂದು ಕೇಳಿದ್ದೇನೆ. ಆದು ಅರಣ್ಯ ಇಲಾಖೆಯವರ ಪರಿಶೀಲನೆಯಲ್ಲಿ ಇದೆ.

ಶ್ರೀಮತಿ ರಾಧಾಭಟ್.—ಈ ಇಂಡಸ್ಟ್ರಿಯನ್ನು ಆದಷ್ಟು ಬೇಗ ಸ್ಥಾಪಿಸಲು ಯಾವ ಕಾರ್ಯಕ್ರಮ ಕೈಕೊಳ್ಳುತ್ತೀರಿ ಮತ್ತು ಅದಕ್ಕೆ ಎಷ್ಟು ಕಾಲಾವಕಾಶ ಬೇಕು ?

ಶ್ರೀ ಎಸ್. ಎಂ. ಕೃಷ್ಣ.—ಇದು ಕಾಲಾವಕಾಶದ ಪ್ರಶ್ನೆಗಿಂತಲೂ ಮುಖ್ಯವಾಗಿ ಅರಣ್ಯ ಇಲಾಖೆಯವರ ಮುಷ್ಟಿಯಿಂದ ಜಮೀನನ್ನು ಬಿಡಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ನತತ ಪ್ರಯತ್ನ ನಡೆಯುತ್ತಿದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ ಸಿರಸಿ ಕ್ಷೇತ್ರದಲ್ಲಿರತಕ್ಕ ಮತಿಘಟ್ಟದಲ್ಲಿ 20 ಮಿಲಿಯನ್ ಟನ್ ಕಬ್ಬಿಣದ ಅದಿರು ಸಿಕ್ಕುತ್ತದೆಂದು ಉತ್ತರದಲ್ಲಿ ಕೊಟ್ಟಿದ್ದೀರಿ, ಆ ಅದಿರನ್ನು ಉಪಯೋಗಿಸುವುದಕ್ಕೆ ಈವರೆಗೆ ಪ್ರಯತ್ನ ನಡೆದಿಲ್ಲವೇ, ಕೇವಲ ಅರಣ್ಯ ಇಲಾಖೆಯವರು ಜಮೀನನ್ನು ಕೊಡಲಿಲ್ಲ ಅದರಿಂದ ಅಳವಡಿಸಿಕೊಳ್ಳುವುದಕ್ಕೆ ಆಗಲಿಲ್ಲ ಎನ್ನುವುದು ಒಂದೇ ಕಾರಣವೇ, ಅರಣ್ಯ ಇಲಾಖೆಯವರಿಂದ ಜಮೀನು ಪಡೆದ ಕೂಡಲೇ ಸ್ಥಾಪನೆ ಮಾಡುತ್ತೀರಾ ? ಯಾವಾಗ ಅರಣ್ಯ ಇಲಾಖೆಯವರನ್ನು ಕೇಳಿದ್ದೀರಿ, ಅವರು ಏನು ಉತ್ತರ ಹೇಳಿದರು, ಅಳವಡಿಸುತ್ತೀರೋ ಇಲ್ಲವೇ, ಹೇಗೆ ಮುಂದುವರಿಸುತ್ತೀರಿ, ಇಂಥ ಕಾಲದಲ್ಲಿ ಮಾಡುತ್ತೇವೆಂಬ ಅಭಯವನ್ನು ಕೊಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ನರ್ವೆ ನಂಬರ್ 232, 1969ರಲ್ಲಿ ಕೊಟ್ಟಿದ್ದಾರೆ. ನಮಗೇ ಕೊಡಿ ಎಂದು ಅರಣ್ಯ ಇಲಾಖೆಯವರನ್ನು ಕೇಳಿದ್ದೇವೆ. ಆದಾದಮೇಲೂ ಕೇಳುತ್ತಲೇ ಬಂದಿದ್ದೇವೆ. ಅವರು ಕೊಟ್ಟ ತಕ್ಷಣ ನಾವು ಇಂಡಸ್ಟ್ರಿಯಲ್ ಎಸ್ಟೇಟ್ ಕೆಲಸ ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಎರಡನೆಯದು ಕರ್ನಾಟಕದಲ್ಲಿ ಅತ್ಯಂತ ಗಣನೀಯವಾದ ಪ್ರಮಾಣದಲ್ಲಿ ಕಬ್ಬಿಣದ ಅದಿರು ಸಿಗುತ್ತದೆ 20 ಮಿಲಿಯನ್ ಟನ್ ಈ ಪ್ರದೇಶದ ಮತ್ತು ಕುದುರೆ ಮುಖ ಪ್ರದೇಶದಲ್ಲಿ ಮತ್ತಿತರ ಪ್ರದೇಶಗಳಲ್ಲೂ ಕೂಡ ಹೇರಳವಾಗಿ ಖನಿಜ ಸಂಪತ್ತು ಇದೆ. ಅದನ್ನು ಹೊರಗೆ ತೆಗೆದು ಕೊಂಡು ಬಂದಮೇಲೆ ರೂಪ ಕೊಡಬೇಕು, ರೂಪ ಕೊಡುವುದಕ್ಕೆ ಇರತಕ್ಕ ದೊಡ್ಡ ಆತಂಕ ಎಂದರೆ ಹಣಕಾಸಿನ ಪರಿಸ್ಥಿತಿ.

ಶ್ರೀ ಕೊಣಂದೂರು ಲಿಂಗಪ್ಪ.—ಸ್ವಾಮಿ, ರಾಜ್ಯದ ಬೊಕ್ಕಸಕ್ಕೆ ನೇರವಾಗಿ ಬರತಕ್ಕ, ವರಮಾನವನ್ನು ಕೊಡತಕ್ಕ ಇಂಥ ಗಣಿಗಳಿ, ಇಂಥ ಕಬ್ಬಿಣದ ಅದಿರನ್ನು ತೆಗೆಯತಕ್ಕ ಪ್ರದೇಶವನ್ನು ಉದ್ದೇಶಪೂರ್ವಕವಾಗಿ ಅರಣ್ಯ ಇಲಾಖೆಯವರು ಕೊಡದೇ ತಡೆಹಿಡಿಯುತ್ತಿದ್ದಾರೆ, ಸತಾಯಿಸುತ್ತಿದ್ದಾರೆ. ಇದು ಎಲ್ಲಾ ಕಡೆಗೂ ನಡೆಯುತ್ತಿರುವುದು. ಯೋಗಿಮತಿಯಲ್ಲಿ ಸರ್ಕಾರದವರು ಇಂಥ ಉದ್ದಿಮೆಯನ್ನು ಮಾಡುತ್ತಿದ್ದಾರೆ. ಅರಣ್ಯ ಇಲಾಖೆಯವರು ಅದಕ್ಕೂ ಕೊಡಲಿಲ್ಲ. ಅದಕ್ಕಾಗಿ ಸರ್ಕಾರದವರು ತೀವ್ರ ಗಮನವನ್ನು ಹರಿಸಿ, ಮುಖ್ಯವಾಗಿ ಅರಣ್ಯ ಇಲಾಖೆಯವರಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರತಕ್ಕ ವರಮಾನದ ಪ್ರದೇಶವನ್ನು ತತ್‌ಕ್ಷಣ ರಿಲೀಜ್ ಮಾಡಿ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಇಲ್ಲಿ ದೊರೆಕತಕ್ಕಂಥ ಕಬ್ಬಿಣದ ಅದಿರಿಗೂ ಅರಣ್ಯ ಇಲಾಖೆಗೂ ಸಂಬಂಧವಿಲ್ಲ. ಕಬ್ಬಿಣದ ಅದಿರು ಇದ್ದ ಮಾತ್ರಕ್ಕೆ ದೇಶದ ಸಂಪತ್ತು ವೃದ್ಧಿಯಾಗುವುದಿಲ್ಲ. ಅದನ್ನು ಹೊರಗೆ ತೆಗೆದ ಮೇಲೆ ಅದನ್ನು ಉಪಯೋಗ ಮಾಡುವುದಕ್ಕೆ ಬೇರೆ ಯೋಜನೆಗಳು ಇವೆ. ಅದಕ್ಕಾಗಿ ಇಂಡಸ್ಟ್ರಿಯಲ್ ಎಸ್ಟೇಟ್‌ಗಳನ್ನು ತೆಗೆಯುವ ಬೇರೆ ಬೇರೆ ಯೋಜನೆಗಳು ಇವೆ. ಹಲವಾರು ಬಾರಿ ಮಾನ್ಯ ಸದಸ್ಯರು ಹೇಳಿದ್ದಾರೆ, ಅರಣ್ಯ ಸಂಪತ್ತು ನಾಶವಾಗುತ್ತಿದೆ, ಆಲ್ ಇಂಡಿಯಾ ಲೆವೆಲ್‌ನಲ್ಲಿ ಕಡಿಮೆ ಇದೆ. ಈ ಎರಡು ದ್ವಂದಗಳಿಂದ ವಿಮುಕ್ತವಾಗುವುದಕ್ಕೆ ಪ್ರಯತ್ನ ಮಾಡಬೇಕು.